# ಗಾಂಧಿ ಮೈದಾನ ಮತ್ತು ಟೆಂಟ್ ಸಿನಿಮಾ



ತಿರುವುಗಳಲ್ಲಿ ಬಸ್ಸು ತಿರುತಿರುಗಿ ಓಲಾಡುತ್ತಾ ಬಂದಿದ್ದರಿಂದ ರಾತ್ರಿ ಸರಿಯಾಗಿ ನಿದ್ದೆ ಆಗಿರಲಿಲ್ಲ. ಬೆಳಗಿನ ಜಾವದಲ್ಲಿ ತೂಕಡಿಕೆ ಹತ್ತಿ ಕಣ್ಣುಗಳು ಮುಚ್ಚಿದ್ದವು. ಊರು ಹತ್ತಿರ ಬರುತ್ತಿದ್ದಂತೆ ಕಂಡಕ್ಟರ್ ಕೂಗಿದ್ದರಿಂದ ಎಚ್ಚರವಾದರೂ, ಇನ್ನೂ ಅರೆಬರೆ ನಿದ್ದೆಯಲ್ಲಿದ್ದ ಮಂಜುಗಣ್ಣು. ಬಸ್ಸು ಊರಿನ ಹೆಬ್ಬಾಗಿಲು ದಾಟಿ ಊರೊಳಗೆ ಬಂತು. ನೇರವಾಗಿ ಹೋಗುವುದರ ಬದಲು ಎಡಕ್ಕೆ ತಿರುಗಿ, ನಂತರ ಬಲಕ್ಕೆ ತಿರುಗಿತು. 'ಇದ್ಯಾವುದಪ್ಪ, ಹೊಸ ದಾರಿ?!' ಎಂದು ಕಣ್ಣು ಹೊಸಕಿ ನೋಡಿದೆ. ಇಷ್ಟು ವರ್ಷ ಊರಿಗೆ ಬಂದಿದ್ದರೂ ಈ ಹೊಸ ದಾರಿಯನ್ನು ಕಾಣುತ್ತಿರುವುದು ಇದೇ ಮೊದಲು. ಹೊಸ ಹೊಸ ಮನೆಗಳು, ಹೊಸ ಹೊಸ ಜನ, ಹೊಸ ದಾರಿ! ಕಂಡಕ್ಟರ್ ಊರು ಬಂತು ಎನ್ನುತ್ತಿದ್ದಾರೆ. ಆದರೆ ನಮ್ಮೂರಾ ಅಥವಾ ಬಸ್ಸು ಬೇರೆ ಊರಿನ ಮಾರ್ಗವಾಗಿ ನಮ್ಮೂರಿಗೆ ಹೋಗುತ್ತಿದೆಯಾ? ಕಕ್ಕಾಬಿಕ್ಕಿಯಾಯಿತು. ಅರೆ! ದಾರಿಯ ಹತ್ತಿರದಲ್ಲೇ ಹೊಳೆ ಹರಿಯುತ್ತಿದೆ! ಸ್ವಲ್ಪ ಮುಂದೆ ಸಾಗಿದಂತೆ ಹೊಳೆಯ ದಡಗಳನ್ನು ಕೂಡಿಸುವ ಒಂದು ಸೇತುವೆ ಕಾಣುತ್ತಿದೆ! ಅದರ ಮೇಲೆ ಜನರ ಓಡಾಟ ಸಾಗಿದೆ. ಬಸ್ಸಿನಲ್ಲಿ ಎಡಬದಿಗೆ ಕುಳಿತಿದ್ದರಿಂದ ಇವೆಲ್ಲ ದೃಶ್ಯಗಳು ಕಾಣಿಸಿದವು. ಬಲಬದಿಗೆ ಹೇಗಿತ್ತು ಎಂದು ಗೊತ್ತಾಗಲಿಲ್ಲ. ಬಸ್ಸು ಮುಂದೆ ಸಾಗಿ ಬಲಕ್ಕೆ ತಿರುಗಿ ಸ್ವಲ್ಪ ಮುಂದೆ ಹೋಯಿತು. ಅತಿಥಿಗೃಹ, ಶ್ರೀಮಠದ ಮುಖ್ಯದ್ವಾರ ಕಾಣಿಸಿದವು. ಮುಂದೆ ನೇರವಾಗಿ ಹೋದರೆ ಬಸ್‌ಸ್ಟ್ಯಾಂಡ್. ಹೋ! ಈಗ ಗೊತ್ತಾಯಿತು. ಬಸ್ಸು ಹೊಳೆಗೋಣೆಯ ಮೂಲಕ ಬಂದಿತ್ತು! ಚಿಕ್ಕಂದಿನಿಂದ ಆಡಿ ಬೆಳೆದಿದ್ದ,